# ಸಂಪಾದಕೀಯ

ಭಾಷೆ ಹಾಗೂ ಸಾಹಿತ್ಯಗಳು ನಿರಂತರವಾಗಿ ಚಲನಶೀಲವಾದವುಗಳಾಗಿದ್ದು, ಆಯಾ ಕಾಲಘಟ್ಟದಲ್ಲಿ ಹೊಸ ಸಾಹಿತ್ಯ ರಚನೆಯಲ್ಲಿ ಸಾಹಿತಿಗಳ ಸೃಜನಶೀಲ ಪ್ರಜ್ಞೆ ಸಹಜವಾಗಿ ಕೆಲಸ ಮಾಡುತ್ತದೆ.

ಅನುವಾದವು ವಿವಿಧ ಭಾಷೆಗಳ ನಡುವೆ ಅನುಸಂಧಾನವನ್ನು ಏರ್ಪಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅನುವಾದವು ಒಂದು ವಿಶಿಷ್ಟ ಕಲೆ. ಒಂದು ಭಾಷೆಯ ಕೃತಿಯು ಇನ್ನೊಂದು ಭಾಷೆಯಲ್ಲಿ ಅನುವಾದದ ಮೂಲಕ ಮರು ಸೃಷ್ಟಿಗೊಳ್ಳುತ್ತದೆ ಮತ್ತು ಆ ಭಾಷೆಯ ಓದುಗರಿಗೆ ತಲುಪುತ್ತದೆ.

ಯಾವುದೇ ಒಂದು ಭಾಷೆಯಲ್ಲಿ ರಚನೆಯಾದ ಮಹತ್ವದ ಕೃತಿಗಳು ವೈವಿಧ್ಯಮಯ ಓದುಗರಿಗೆ ತಲುಪಲು ಅನುವಾದದ ಮೂಲಕ ಸಾಧ್ಯವಾಗುತ್ತದೆ. ಒಂದು ಭಾಷೆಯಲ್ಲಿ ರಚನೆಯಾದ ವಿದ್ವತ್ಪೂರ್ಣ ಸಂಗತಿಗಳು ಈ ಮೂಲಕ ವ್ಯಾಪಕ ಸಂಖ್ಯೆಯ ಹಾಗೂ ಭಿನ್ನ ಭಾಷಿಕ ಹಿನ್ನೆಲೆಯುಳ್ಳ ಓದುಗರಿಗೆ ತಲುಪುವುದು ಸಾಧ್ಯವಾಗುತ್ತದೆ.

ಅನುವಾದದ ಕುರಿತು ಈ ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುವುದರ ಉದ್ದೇಶವೇನೆಂದರೆ ಅನುವಾದ ವಿವಿಧ ಭಾಷೆಗಳ ಮಧ್ಯೆ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುವುದಲ್ಲದೆ ನಿರ್ದಿಷ್ಟ ಪ್ರಾದೇಶಿಕ ಭಾಷೆಯಲ್ಲಿ ಲಭ್ಯವಿರುವ ಜ್ಞಾನವನ್ನು ಜಾಗತಿಕ ಮಟ್ಟದಲ್ಲಿ ಪಸರಿಸುವುದು ಸಾಧ್ಯವಾಗುತ್ತದೆ.

ಶ್ರೀವಿಜಯನ ಕವಿರಾಜಮಾರ್ಗ, ಶಿವಕೋಟಾಚಾರ್ಯನ ವಡ್ಡಾರಾಧನೆ, ರನ್ನನ ಗದಾಯುದ್ಧ ಕೃತಿಗಳು ಆಂಗ್ಲ ಭಾಷೆಗೆ ಅನುವಾದವಾಗುವುದರ ಮೂಲಕ ಪ್ರಾಚೀನ ಕನ್ನಡ ಸಾಹಿತ್ಯ ಹಾಗೂ ಶಾಸ್ತ್ರ ಸಾಹಿತ್ಯದ ವಿಶಿಷ್ಟ ಸಂಗತಿಗಳು ಜಾಗತಿಕ ಮಟ್ಟದಲ್ಲಿ ಓದುಗರನ್ನು ತಲುಪಲು ಸಾಧ್ಯವಾಗಿದೆ.

ಇತ್ತೀಚೆಗೆ ಮಧ್ಯಕಾಲೀನ ಕನ್ನಡ ಸಾಹಿತ್ಯದ ಮಹತ್ವದ ಕೃತಿಯಾದ ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ ಕೃತಿಯ ಆಯ್ದ ಭಾಗಗಳು ಆಂಗ್ಲ ಭಾಷೆಗೆ ಅನುವಾದವಾಗುವುದರ ಮೂಲಕ ಇನ್ನೊಂದು ಮಹತ್ವದ ಕೃತಿಯ ಸಂಗತಿಗಳು ವಿಶ್ವ ಮಟ್ಟದಲ್ಲಿ ಓದುಗರಿಗೆ ತಲುಪುತ್ತಿರುವುದು ಸಂತಸದ ಸಂಗತಿ. ಕನ್ನಡದಲ್ಲಿ ರಚನೆಯಾದ ಆಯ್ದ ವಚನಗಳು ೨೫ಕ್ಕೂ ಹೆಚ್ಚು ಭಾಷೆಗಳಿಗೆ ಅನುವಾದವಾಗಿರುವುದು ಗಮನಾರ್ಹ ಸಂಗತಿ.

ಕನ್ನಡ ಭಾಷೆ ೨೦೦೦ ವರ್ಷಗಳಿಗೂ ಹೆಚ್ಚಿನ ಇತಿಹಾಸವನ್ನು ಹೊಂದಿದ್ದು, ಜಗತ್ತಿನ ಭಾಷೆಗಳಲ್ಲಿ ಬಹಳ ಮಹತ್ವದ ಸ್ಥಾನವನ್ನು ಹೊಂದಿದೆ. ಕನ್ನಡದಲ್ಲಿ ಪ್ರತಿಪಾದಿತವಾದ ದಾರ್ಶನಿಕ ಸಂಗತಿಗಳು, ತಾತ್ವಿಕ ಆಲೋಚನೆಗಳಂತಹ ಮಹತ್ವದ ಸಂಗತಿಗಳು ಆಂಗ್ಲ ಮತ್ತು ಇತರ ಭಾಷೆಗಳಿಗೆ ಅನುವಾದದ ಮೂಲಕ ತಲುಪಲು ಸಾಧ್ಯವಾಗುತ್ತಿರುವುದು ಸಂತಸದ ಸಂಗತಿ. ಆಂಗ್ಲ ಮತ್ತು ಇತರ ಭಾಷೆಗಳಿಂದ ಕನ್ನಡಕ್ಕೆ ಅನೇಕ ಕೃತಿಗಳು ಅನುವಾದವಾಗುವುದರ ಮೂಲಕ ನಾವು ವೈವಿಧ್ಯಮಯ ಆಲೋಚನೆಗಳಿಗೆ ತೆರೆದುಕೊಳ್ಳುತ್ತಿರುವಂತೆ ಕನ್ನಡದ ಕೃತಿಗಳನ್ನು ಇತರೆ ಭಾಷೆಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅನುವಾದಿಸುವುದರ ಮೂಲಕ ಜಾಗತಿಕ ಮಟ್ಟದಲ್ಲಿ ತಲುಪಿಸುವ ಕಾರ್ಯವನ್ನು ಸಾಂಘಿಕವಾಗಿ ಮಾಡಬೇಕಾಗಿದೆ.

ಪ್ರಸ್ತುತ ಸಂಚಿಕೆಯ ಕೃತಿಗಳು ಶಾಸನ, ವಚನ ಸಾಹಿತ್ಯ, ಕಾದಂಬರಿ ಸಾಹಿತ್ಯ, ಕ್ಷೇತ್ರ ಕಾರ್ಯ ಆಧಾರಿತ ತಾತ್ವಿಕ ಬರಹ ಸೇರಿದಂತೆ ವೈವಿಧ್ಯಮಯ ವಿಷಯಗಳಿಂದ ಕೂಡಿದ್ದು, ಸಹೃದಯರು ಓದಿ ಪ್ರತಿಕ್ರಿಯಿಸುವಿರೆಂಬ ಅಭಿಲಾಷೆ ನಮ್ಮದಾಗಿದೆ.  ತಮ್ಮ ಸಲಹೆ ಸೂಚನೆಗಳಿಗೆ ಸದಾ ಸ್ವಾಗತ.

ವಂದನೆಗಳೊಂದಿಗೆ, ಡಾ. ವಿವೇಕಾನಂದ ಸಜ್ಜನ